ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 1/2025**

ಪಿಡಬ್ಲ್ಯುಃ –1

ದಿನಾಂಕಃ 16.06.2026ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ. ಎ ಜಿ ಜಿ ರವರಿಂದಃ–

ನಾನು ನೆಲಜಿ ಗ್ರಾಮದ ವಾದಿ. ಪ್ರತಿವಾದಿ ಹೊದ್ದೂರು ಗ್ರಾಮದ ವಾಸಿ. ನಮ್ಮಿಬ್ಬರ ಊರಿಗೆ ಸುಮಾರು 18 ಕಿ ಮೀ ಆಗುತ್ತದೆ. ನನ್ನ ಮತ್ತು ಪ್ರತಿವಾದಿ ನಡುವೆ ಹಿಂದೆ ಯಾವುದೇ ವ್ಯವಹಾರ ಇರಲಿಲ್ಲ, ಪರಿಚಯ ಮಾತ್ರ ಇತ್ತು. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಇದ್ದು, ಅದು ನನ್ನ ಸ್ವಾಧೀನ ಅನುಭವದಲ್ಲಿ ಇದ್ದೇನೆ ಎಂದರೆ ಸರಿ. ಈ ದಾವೆ ಹಾಕಿದಾಗಿನಿಂದಲೂ ಪ್ರತಿವಾದಿ ದಾವಾ ಸ್ವತ್ತಿನ ಬಳಿ ಬಂದಿಲ್ಲ ಎಂದರೆ ಸರಿ. ಮೊದಲು ಪ್ರತಿವಾದಿ ದಾವಾ ಸ್ವತ್ತನ್ನು 8 ವರ್ಷಗಳಿಗೆ ಲೀಜೆಗೆಂದು ಪಡೆದುಕೊಂಡಿದ್ದರು ಎಂದರೆ ಸರಿ. ಸದರಿ ಲೀಜ್ ವ್ಯವಹಾರ ಆಗುವ ಕಾಲಕ್ಕೆ ಪ್ರತಿವಾದಿ ನನಗೆ ರೂ.3,25,000/– ಹಣ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಲೀಜ್ ಅಗ್ರಿಮೆಂಟ್ ಕಾಪಿ ಹಾಗೂ ಮೂಲ ಅಗ್ರಿಮೆಂಟ್ ನನ್ನ ಬಳಿ ಇಲ್ಲ. 2022 ರಲ್ಲಿ ಸದರಿ ಲೀಜ್ ಅಗ್ರಿಮೆಂಟ್ ಆಗಿರುತ್ತದೆ ಎಂದರೆ ಇರಬಹುದು. ಸದರಿ ಲೀಜ್ ಅಗ್ರಿಮೆಂಟಿನ ಬಾಬ್ತು ನಾನು ಪ್ರತಿವಾದಿಯಿಂದ ರೂ.3,25,000/– ಪಡೆದುಕೊಂಡು ನಂತರ ನಮ್ಮ ನಡುವೆ ವೈಮನಸ್ಸು ಆಗಿದ್ದರಿಂದ ಪ್ರತಿವಾದಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಆಗ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆಗ ನಾನು ಪೊಲೀಸ್ ಠಾಣೆಯಲ್ಲಿ ಪ್ರತಿವಾದಿ ಕೈಯಿಂದ ಮೂಲ ಅಗ್ರಿಮೆಂಟನ್ನು ಕಿತ್ತುಕೊಂಡು, ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಬರದಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ರೂ.3,25,000/– ಹಣ ವಸೂಲಾತಿಗಾಗಿ ದಾವೆ ಹಾಕುತ್ತಾರೆ ಹಾಗೂ ದಾವಾ ಸ್ವತ್ತಿನ ಬಳಿ ಬರುತ್ತಾರೆ ಎಂದು ಹೇಳಿ ನಾನು ಅವರ ವಿರುದ್ಧ ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ. ನಾನು ಪ್ರತಿವಾದಿ ಕೈಯಿಂದ ಮೂಲ ಲೀಜ್ ಅಗ್ರಿಮೆಂಟ್ ಕಿತ್ತುಕೊಂಡು ಹೋಗಿದ್ದರಿಂದ ಪ್ರತಿವಾದಿಯು ರೂ.3,25,000/– ಹಣವನ್ನು ನನ್ನಿಂದ ವಸೂಲಿ ಮಾಡಲು ದಾವೆ ಹಾಕಲು ಆಗಲಿಲ್ಲ ಎಂದರೆ ಸಾಕ್ಷಿಯು ಅವರು ನನ್ನಿಂದ ರೂ.3,25,000/– ಹಣವನ್ನು ವಸೂಲಿ ಮಾಡಿದ್ದಾರೆ ಎನ್ನುತ್ತಾರೆ. ನಾನು ಪ್ರತಿವಾದಿ

ಹೆಸರಿಗೆ ಜನವರಿ–2025ರಲ್ಲಿ ಸಲಾಂ ಎನ್ನುವವರ ಚೆಕ್ಕನ್ನು ಪ್ರತಿವಾದಿಗೆ ನೀಡಿದ್ದೆ. ಪ್ರತಿವಾದಿಗೆ ನಾನು ರೂ.3,25,000/–ಹಣವನ್ನು ಪಾವತಿ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲೀಜ್ ಅಗ್ರಿಮೆಂಟಿನ ಬಾಬ್ತು ರೂ.3,25,000/– ಹಣವನ್ನು ನಾನು ಪ್ರತಿವಾದಿಗೆ ಹಿಂದಿರುಗಿಸಿದ್ದೇನೆ ಎಂದು ಹೇಳಲು ಯಾವುದೇ ದಾಖಲೆ ಮಾಡಿಕೊಂಡಿಲ್ಲ. ಸಲಾಂ ಮುಖಾಂತರ ನಾನು ಪ್ರತಿವಾದಿಗೆ ರೂ.3,25,000/– ಹಣವನ್ನು ಮರುಪಾವತಿ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನಾನು ಪ್ರತಿವಾದಿಯ ಜೊತೆ ಆಗಿರುವ ಲೀಜ್ ಅಗ್ರಿಮೆಂಟ್ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿಯೇ ನಾನು ಸದರಿ ಲೀಜ್ ಅಗ್ರಿಮೆಂಟ್ ವಿಚಾರವನ್ನು ದಾವೆಯಲ್ಲಿ ಮರೆ ಮಾಚಿದ್ದೇನೆ ಎಂದರೆ ಸರಿಯಲ್ಲ. ಲೀಜ್ ಅಗ್ರಿಮೆಂಟ್ ಬಾಬ್ತು ನಾನು ಪ್ರತಿವಾದಿಗೆ ರೂ.3,25,000/– ಹಣ ಇನ್ನೂ ಬಾಕಿ ಇದ್ದು ಅದನ್ನು ಮರುಪಾವತಿ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.
ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ. ಎಂ. ಎಫ್. ಸಿ., ಮಡಿಕೇರಿ.**